ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ-584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ

ಆಡಳಿತ ವಿಭಾಗ E-mail: registrarrur@gmail.com

ಸಂಖ್ಯೆ: ರಾವಿರಾ/ಆಡಳಿತ/2022-23/617 ದಿನಾಂಕ:02.08.2022

# ಸುತ್ತೋಲೆ

ವಿಷಯ: ವಿಶ್ವವಿದ್ಯಾಲಯದ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸುವ ಕುರಿತು.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂ: ಇಡಿ/99/ಯುಎಇ/2021 ದಿನಾಂಕ: 09-07-2022ರ

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಯಚೂರು ವಿಶ್ವವಿದ್ಯಾಲಯವು 75ನೇ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ವೈವಿಧ್ಯಮಯ ಸ್ಪರ್ಧೆಗಳನ್ನು ಹಾಗೂ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ.

15ನೇ ಆಗಸ್ಟ್ 2022ರಂದು ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷಗಳು ಪೂರ್ಣಗೊಳ್ಳುತ್ತವೆ. ಈ ಶುಭ ಸಂದರ್ಭದಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ರಾಷ್ಟ್ರದ ಮಹೋನ್ನತ ಇತಿಹಾಸದ ನೆನಪುಗಳನ್ನು ಪುನಃ ಜೀವಂತಗೊಳಿಸುವ ನಿಟ್ಟಿನಲ್ಲಿ ವೈವಿಧ್ಯಮಯ ಚಟುವಟಿಕೆಗಳನ್ನು ಕಾಲೇಜುಗಳ ಹಂತ, ವಿಶ್ವವಿದ್ಯಾಲಯದ ಮಟ್ಟದಲ್ಲಿ (ಅಂತರ್ ಘಟಕಗಳು) ಹಾಗೂ ರಾಜ್ಯ ಮಟ್ಟದಲ್ಲಿ ಸ್ಪರ್ಧೆಗಳನ್ನು (ಅಂತರ್ ವಿಶ್ವವಿದ್ಯಾಲಯಗಳು) ಆಯೋಜಿಸಲು ರಾಜ್ಯ ಸರಕಾರ ಉದ್ದೇಶಿಸಲಾಗಿದೆ. ಈಗಾಗಲೇ ಘಟಕ ಹಂತ (ಅಂತರ್ ಕಾಲೇಜುಗಳು) ಸ್ಪರ್ಧೆ ಪೂರ್ಣಗೊಂಡಿದ್ದು, ಈ ಸ್ಪರ್ಧೆಗಳಲ್ಲಿ ವಿಜೇತರಾದ ಮೊದಲ 5 ವಿದ್ಯಾರ್ಥಿಗಳನ್ನು ನಮ್ಮ ರಾಯಚೂರು ವಿಶ್ವವಿದ್ಯಾಲಯದಲ್ಲಿ ದಿನಾಂಕ: 04-08-2022ರಂದು ವಿಶ್ವವಿದ್ಯಾಲಯದ ಹಂತದಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಈ ಸಂಭ್ರಮಾಚರಣೆಯ ಅಂಗವಾಗಿ ಆಯೋಜಿಸಬೇಕಾದ ವಿಶ್ವವಿದ್ಯಾಲಯದ ಮಟ್ಟದ ವೈವಿಧ್ಯಮಯವಾದ ಸ್ಪರ್ಧೆಗಳು ಹಾಗೂ ಚಟುವಟಿಕೆಗಳ ಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ.

**ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಕುರಿತು ಸ್ಪರ್ಧೆಗಳನ್ನು ಏರ್ಪಡಿಸುವ ಪಟ್ಟಿ**

| | | |
|---|---|---|
| 1. ಪ್ರಬಂಧ ಸ್ಪರ್ಧೆ | 2. ಚರ್ಚಾ ಸ್ಪರ್ಧೆ | 3. ದೇಶಭಕ್ತಿ ಗೀತೆಗಳ ಸ್ಪರ್ಧೆ |
| 4. ಕಿರು ನಾಟಕಗಳ ಸ್ಪರ್ಧೆ | 5. ಪೇಟಿಂಗ್ ಸ್ಪರ್ಧೆ | 6. ಸ್ವಾತಂತ್ರ್ಯ ಓಟದ ಸ್ಪರ್ಧೆ |

ಈ ಮೇಲೆ ತಿಳಿಸಿದ ಸ್ಪರ್ಧೆಗಳಲ್ಲಿ ಮೊದಲ 5 ಸ್ಥಾನಗಳನ್ನು ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾಲಯಕ್ಕೆ ಆಯಾ ಕಾಲೇಜುಗಳು ದಿನಾಂಕ: 03-08-2022ರೊಳಗಾಗಿ ಸಲ್ಲಿಸಬೇಕಾಗಿ ಸೂಚಿಸಲಾಗಿದೆ.

ರಾಜ್ಯ ಮಟ್ಟದ ಸ್ಪರ್ಧೆಗಳ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

**ಭಾರತದ ಸ್ವಾತಂತ್ರ್ಯದ ಚಳುವಳಿಯ ಕುರಿತು ಸ್ಪರ್ಧೆಗಳನ್ನು ಏರ್ಪಡಿಸುವ ಕುರಿತು ಮಾರ್ಗಸೂಚಿಗಳು**

| ಕ್ರ.ಸಂ. | ಸ್ಪರ್ಧೆಯ ಹೆಸರು | ವಿಷಯ | ಭಾಗವಹಿಸು-ವವರು | ಸಂಗಡಿಗರು | ಒಟ್ಟು | ಸಮಯ |
|---|---|---|---|---|---|---|
| 1 | ಪ್ರಬಂಧ ಸ್ಪರ್ಧೆ | ಭಾರತದ ಸ್ವಾತಂತ್ರ್ಯದ ಹೋರಾಟಗಾರರು | 01 | – | 01 | 60 ನಿಮಿಷ |
| 2 | ಚರ್ಚಾ ಸ್ಪರ್ಧೆ | ಭಾರತ, ಜಾಗತಿಕ ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮಿ-ದೆಯೇ? | 02 | – | 02 | 05 ನಿಮಿಷ |
| 3 | ಪೇಂಟಿಂಗ್ ಸ್ಪರ್ಧೆ | ಸ್ವಾತಂತ್ರ್ಯ ಹೋರಾಟದ ಸನ್ನಿವೇಶ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಕುರಿತು | 01 | – | 01 | 2.15 ನಿಮಿಷ |
| 4 | ಅ. ದೇಶಭಕ್ತಿ ಗೀತೆಗಳ ಸ್ಪರ್ಧೆ (ವೈಯಕ್ತಿಕ) | ಸ್ವಾತಂತ್ರ್ಯೋತ್ಸದ ಕುರಿತು | 01 | – | 01 | 05 ನಿಮಿಷ |
| | ಬ. ದೇಶಭಕ್ತಿ ಗೀತೆಗಳ ಸ್ಪರ್ಧೆ (ಸಮೂಹ) | ಸ್ವಾತಂತ್ರ್ಯೋತ್ಸದ ಕುರಿತು | 05 | 03 | 08 | 10 ನಿಮಿಷ |
| 5 | ಕಿರು ನಾಟಕಗಳ ಸ್ಪರ್ಧೆ | ಸ್ವಾತಂತ್ರ್ಯ ಹೋರಾಟದ ಸನ್ನಿವೇಶ ಮತ್ತು ಸ್ವಾತಂತ್ರ್ಯ ಹೋರಾಟಗಾರರ ಕುರಿತು | 05 | 03 | 08 | 15 ನಿಮಿಷ |
| 6 | ಸ್ವಾತಂತ್ರ್ಯ ಓಟದ ಸ್ಪರ್ಧೆ | ಪುರುಷರಿಗೆ 2 ಕಿ.ಮೀ. ಮಹಿಳೆಯರಿಗೆ 1 ಕಿ.ಮೀ. | 01 | – | 01 | 30 ನಿಮಿಷ |

Sd/- 02/08/22

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು.